**ದಿನಾಂಕಃ 16.09.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಂದುವರಿದ ಪಾಟೀ ಸವಾಲು: ಎದುರುದಾರರ ಪರ ವಕೀಲರಾದ ಶ್ರೀ.KS ರವರಿಂದಃ**

1) ಈ ಪ್ರಕರಣದ ಅರ್ಜಿದಾರರಾದ ವೈಶಾಂಕ್ ಸಪ್ಪೆ ರವರಿಗೂ ಮತ್ತು ನನಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸುಳ್ಳು. ಸಾಕ್ಷಿಯು ಮುಂದುವರೆದು "ಆತನು ನನ್ನ ಮಗ ಆಗಿದ್ದಾನೆ" ಎಂದು ನುಡಿದಿದ್ದಾರೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿಯು ಇರುವುದಿಲ್ಲ ಎಂದರೆ ಸುಳ್ಳು.

2) ವಿಭಾಗ ಪತ್ರ **(ನಿ.ಪಿ.9)** ರ ಮೂಲಕ ಅರ್ಜಿದಾರರಿಗೆ ಯಾವ ಆಸ್ತಿ ಬಂದಿದೆ ಎಂದು ನನಗೆ ತಿಳಿದಿದೆ. ನಿ.ಪಿ.**9** ರ ಮೂಲಕ ಬೆಂಗಳೂರಿನ ಜುಮ್ಮಾ ಮಸೀದಿ ರಸ್ತೆಯಲ್ಲಿ ಇರುವಂತಹ ಅಂಗಡಿ ಸಂಖ್ಯೆ **84, 85, 86,** ಮತ್ತು ಆ ಅಂಗಡಿಗಳ ತಾರಸಿ ಮೇಲೆ ಇರುವಂತಹ ಜಾಗವು ಅರ್ಜಿದಾರರಾದ ವೈಶಾಕ್ ರವರ ಭಾಗಕ್ಕೆ ಬಂದಿದೆ. ಮೇಲೆ ಹೇಳಿದ **3** ಅಂಗಡಿಗಳ ವಿಸ್ತೀರ್ಣ ಏನು ಎಂದರೆ ಆ ಅಂಗಡಿಗಳು ತಲಾ **18** ಚದರ ಅಡಿ ವಿಸ್ತೀರ್ಣ ಇವೆ ಮತ್ತು ಅವುಗಳ ತಾರಸಿಯ ವಿಸ್ತೀರ್ಣ **1028** ಚದರ ಅಡಿ ಇದೆ.

3) ಮೇಲೆ ಹೇಳಿದ ಅಂಗಡಿ ಮಳಿಗೆ ಸಂಖ್ಯೆ **84, 85,** ಮತ್ತು **86** ಗಳ

ಪ್ರತ್ಯೇಕ ಪ್ರತ್ಯೇಕವಾದ ವಿಸ್ತೀರ್ಣವನ್ನು ನಿ.ಪಿ.**9** ರಲ್ಲಿ ಬರೆದಿರುವುದಿಲ್ಲ.

4) ಮೇಲೆ ಹೇಳಿದ **84, 85** ಮತ್ತು **86** ಸಂಖ್ಯೆಯ ಅಂಗಡಿ ಮಳಿಗೆಗಳ ಖಾತೆಯು ಗವಿರಂಗಪ್ಪ ರವರ ಹೆಸರಿನಲ್ಲೀ ಆಗಲೀ ಅಥವಾ ಅರ್ಜಿದಾರರಾದ ವೈಶಾಕ್ ರವರ ಹೆಸರಿನಲ್ಲಿ ಆಗಲೀ ಇರುವುದಿಲ್ಲ ಎಂದರೆ ಸುಳ್ಳು.

5) ವಿಭಾಗ ಪತ್ರದಲ್ಲಿ ಅಂದರೆ ನಿ.ಪಿ.**9** ರಲ್ಲಿ ಮುರುಗೇಶ್ ಮೊದಲಿಯಾರ್ ರಸ್ತೆಯಲ್ಲಿ ಮತ್ತು ಜುಮ್ಮಾ ಮಸೀದಿ ರಸ್ತೆಯಲ್ಲಿ ವೈಶಾಕ್ ರವರಿಗೆ ಆಸ್ತಿಗಳು ಬಂದಿವೆ ಎಂದು ನಾನು ಹೇಳುತ್ತಿದ್ದೇನೆ ಮತ್ತು ಆ ಆಸ್ತಿಗಳ ವಿವರಗಳನ್ನು ನನಗೆ ಹೇಳಲು ಸಾಧ್ಯ ಇದೆಯೋ ಹೇಗೆ ಎಂದರೆ ಸಾಧ್ಯವಿಲ್ಲ.

6) ನಿ.ಪಿ.**9** ರಲ್ಲಿ ದಿಃ **01.04.1999** ರಂದು ಗವಿರಂಗಪ್ಪ ರವರಿಗೆ ಆಸ್ತಿ ಬಂದಿದೆ ಎಂದು ಬರೆಯಲಾಗಿದೆ ಮತ್ತು ಆ ಆಸ್ತಿಯ ವಿವರವು ಏನು ಎಂದರೆ ಸದರಿ ಆಸ್ತಿಯ ಸಂಖ್ಯೆ **83** ಆಗಿದೆ ಮತ್ತು ಅದು **1028** ಚದರ ಅಡಿ ಇದೆ. ದಿಃ **01.04.1999** ರ ವಿಭಾಗ ಪತ್ರದ ಮೂಲಕ ಗವಿರಂಗಪ್ಪ ರವರಿಗೆ ನೆಲ ಅಂತಸ್ತು, **1** ನೇ ಅಂತಸ್ತು, **2** ನೇ ಅಂತಸ್ತು ಮತ್ತು **3** ನೇ ಅಂತಸ್ತಿನಲ್ಲಿ ಆಸ್ತಿಗಳು ಬಂದಿವೆ. ದಿಃ **01.04.1999** ರ ವಿಭಾಗ ಪತ್ರದ ಮೂಲಕ ನೆಲ ಅಂತಸ್ತಿನಲ್ಲಿ **1028** ಚದರ ಅಡಿ ಮತ್ತು **1** ನೇ ಅಂತಸ್ತಿನಲ್ಲಿ **1100** ಚದರ ಅಡಿ ಮತ್ತು **2** ನೇ ಅಂತಸ್ತಿನಲ್ಲಿ ಸಹಾ

**1100** ಚದರ ಅಡಿ ಮತ್ತು **3** ನೇ ಅಂತಸ್ತಿನಲ್ಲಿಯೂ ಸಹಾ **1100** ಚದರ ಅಡಿ ವಿಸ್ತೀರ್ಣದ ಆಸ್ತಿಯು ಬಂದಿದೆ.

7) ದಿ:**19.11.2012** ರಲ್ಲಿ ಒಂದು **partial partition** ಆಗಿದೆ ಎಂದು ನಿ.ಪಿ.**9** ರಲ್ಲಿ ನಮೂದು ಇದೆ, ಆದರೆ ಆ ಆಸ್ತಿಗಳ ವಿವರ ಹೇಳಲು ಸಾಧ್ಯವಿಲ್ಲ. ನಿ.ಪಿ.**9** ರಲ್ಲಿ ಪುಟ ಸಂಖ್ಯೆ **5** ರಲ್ಲಿ ಪ್ಯಾರಾ ಸಿ ನಲ್ಲಿ ದಿ:**03.04.2014** ರಂದು ಕೆಲವು ಆಸ್ತಿಗಳನ್ನು ಮಾರಾಟ ಮಾಡಲಾಗಿದೆ ಎಂದು ನಮೂದು ಇದೆ, ಆದರೆ ಆ ರೀತಿ ಆಸ್ತಿಗಳ ಕ್ರಯಾ ಮಾಡಿರುವುದು ನನಗೆ ಗೊತ್ತಿಲ್ಲ, ಆದರೆ ಸದರಿ ಆಸ್ತಿಗಳ ವಿಸ್ತೀರ್ಣ ನನಗೆ ಗೊತ್ತಿದೆ.

8) ನಿ.ಪಿ.**9** ರಲ್ಲಿ ಪುಟ ಸಂಖ್ಯೆ **5** ರಲ್ಲಿ ಪ್ಯಾರಾ ಇ ನಲ್ಲಿ ಜಗದೀಶ್ ರವರಿಗೆ ದಿ:**23.06.2018** ರಂದು ಮಾರಾಟ ಮಾಡಲಾಗಿದೆ ಎಂದು ನಮೂದು ಇದೆ ಮತ್ತು ಆತನಿಗೆ ಎಷ್ಟು ಆಸ್ತಿಯನ್ನು ಮಾರಾಟ ಮಾಡಲಾಗಿದೆ ಎಂದರೆ ಆ ಜಗದೀಶ ಯಾರು ಎಂದು ನನಗೆ ಗೊತ್ತಿಲ್ಲ.

9) ನಿ.ಪಿ.**9** ರಲ್ಲಿ ಗವಿರಂಗಪ್ಪ ರವರಿಗೆ **Schedule A** ಮತ್ತು **Schedule B** ಆಸ್ತಿಗಳನ್ನು ಕೊಡಲಾಗಿದೆ ಆದರೆ ಸದರಿ ಆಸ್ತಿಗಳ ವಿವರಗಳು ನನಗೆ ಗೊತ್ತಿರುವುದಿಲ್ಲ.

10) **Letter of Attornment** ನಲ್ಲಿ ಅಂದರೆ ನಿ.ಪಿ.**1** ದಾಖಲೆಯಲ್ಲಿ **84, 85** ಮತ್ತು **86** ಸಂಖ್ಯೆಯ ಆಸ್ತಿಗಳ ವಿಸ್ತೀರ್ಣ ವನ್ನು ಬರೆದಿಲ್ಲ ಎಂದರೆ ನನಗೆ ಗೊತ್ತಿಲ್ಲ.

11) ವಿಭಾಗ ಪತ್ರದಲ್ಲಿ ಅಂದರೆ ನಿ.ಪಿ.**9** ರಲ್ಲಿ ಇರುವ ಮಾಹಿತಿಯ ಆಧಾರದ ಮೇರೆಗೆ ನಾನು ಈ ಪ್ರಕರಣದಲ್ಲಿ ಅರ್ಜಿ ಸ್ವತ್ತಿನ ವಿವರವನ್ನು ಬರೆದಿದ್ದೇನೆ.

12) ನಿ.ಪಿ.**9** ರ ಮೂಲಕ ವೈಶಾಕ್ ರವರಿಗೆ ಎಂ.ಎಂ. ಲೇನ್ ನಲ್ಲಿ ಯಾವುದೇ ಆಸ್ತಿಯು ಬಂದಿಲ್ಲ ಎಂದರೆ ಸುಳ್ಳು.

13) **Letter of Attornment** ನಲ್ಲಿ ಅಂದರೆ ನಿ.ಪಿ.**1** ದಾಖಲೆಯಲ್ಲಿ ಯಾವ ಯಾವ ಆಸ್ತಿಗಳನ್ನು ಅರ್ಜಿದಾರರಾದ ವೈಶಾಕ್ ರವರಿಗೆ ನೀಡಲಾಗಿದೆ ಮತ್ತು ಆ ಆಸ್ತಿಗಳ ಪ್ರತ್ಯೇಕ ಪ್ರತ್ಯೇಕ ವಿಸ್ತೀರ್ಣ ಏನು ಎಂಬ ವಿವರಗಳನ್ನು ಬರೆದಿಲ್ಲ ಎಂದರೆ ಸುಳ್ಳು. ನಿ.ಪಿ.**1** ರಲ್ಲಿ ಆಸ್ತಿಯನ್ನು ಎದುರುದಾರರಿಗೆ ಎಷ್ಟು ಬಾಡಿಗೆಗೆ ಕೊಡಲಾಗಿದೆ ಮತ್ತು ಎದುರುದಾರರು ಗವಿರಂಗಪ್ಪ ರವರಿಗೆ ಎಷ್ಟು ಮುಂಗಡ ಹಣ ಕೊಟ್ಟಿದ್ದಾರೆ ಎಂಬ ವಿವರಗಳನ್ನು ಬರೆದಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.**1** ನ್ನು ಕಳುಹಿಸುವ ಸಮಯದಲ್ಲಿ ಪೂರಕವಾದ ದಾಖಲೆಗಳನ್ನು ಅಂದರೆ ವೈಶಾಕ್

ರವರಿಗೆ ಯಾವ ದಾಖಲೆಗಳ ಮೂಲಕ ಆಸ್ತಿಯನ್ನು ಕೊಡಲಾಗಿದೆ ಎಂಬ ವಿವರಗಳನ್ನು ಬರೆದಿಲ್ಲ ಮತ್ತು ಅಂತಹ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸುಳ್ಳು.

14) ಅರ್ಜಿ ಸ್ವತ್ತಿಗೆ ಅರ್ಜಿದಾರರು ಮಾಲೀಕರು ಆಗಿದ್ದಾರೆ ಎನ್ನುವ ಸಂಬಂಧವಾಗಿ ಇರುವಂತಹ ಯಾವುದೇ ದಾಖಲೆಗಳನ್ನು ನಾವು ನಿ.ಪಿ.**1** ರ ಜೊತೆಯಲ್ಲಿ ಎದುರುದಾರರಿಗೆ ಕಳುಹಿಸಿಕೊಟ್ಟಿರುವುದಿಲ್ಲ ಮತ್ತು ಈ ಪ್ರಕರಣದಲ್ಲಿಯೂ ಸಹಾ ಹಾಜರುಪಡಿಸಿರುವುದಿಲ್ಲ ಎಂದರೆ ಸುಳ್ಳು.

15) ಎದುರುದಾರರಿಗೆ ನಾನು ನಿ.ಪಿ.**7** ರ ರೀತಿ ನೋಟೀಸು ಕೊಟ್ಟಂತಹ ಸಮಯದಲ್ಲಿಯೂ ಸಹಾ ಅರ್ಜಿ ಸ್ವತ್ತು ಅರ್ಜಿದಾರರಿಗೆ ಸೇರಿದ ಆಸ್ತಿ ಎಂಬ ಬಗ್ಗೆ ಯಾವುದೇ ದಾಖಲೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸುಳ್ಳು.

16) ನಿ.ಪಿ.**7** ದಾಖಲೆಯಲ್ಲಿ ಎಷ್ಟು ಬಾಡಿಗೆ ಮತ್ತು ಎಷ್ಟು ಮುಂಗಡ ಹಣ ಕೊಡಲಾಗಿದೆ ಎಂಬ ವಿವರಗಳು ಬರೆದಿಲ್ಲ ಎಂದರೆ ಸರಿ. ನಿ.ಪಿ.**7** ದಾಖಲೆಯ ಜೊತೆಯಲ್ಲಿ ನಾವು ವಿಭಾಗ ಪತ್ರದ ನಕಲನ್ನು ನಾವು ಎದುರುದಾರರಿಗೆ ಕಳುಹಿಸಿಲ್ಲ ಎಂದರೆ ಸುಳ್ಳು. ವಿಭಾಗ ಪತ್ರದ ನಕಲನ್ನೂ ಸಹಾ ಕಳುಹಿಸಲಾಗಿದೆ ಎಂದು ನಿ.ಪಿ.**7** ರಲ್ಲಿ ಬರೆದಿದೆಯೋ ಹೇಗೆ ಎಂದರೆ ಹೇಳಲು ಸಾಧ್ಯವಿಲ್ಲ. ನಿ.ಪಿ.**7** ರಲ್ಲಿ ಆಸ್ತಿಯ ಚಕ್ಕು ಬಂದಿಯನ್ನು ಬರೆದಿಲ್ಲಾ

ಎಂದರೆ ಸುಳ್ಳು.

17) ಎದುರುದಾರರು ನೀಡಿದ್ದಂತಹ ಜವಾಬು ನೋಟಿಸಿನಲ್ಲಿ ಅಂದರೆ ನಿ.ಪಿ.**8** ರಲ್ಲಿ ಪ್ಯಾರಾ **2** ರಲ್ಲಿ ನಮೂದು ಇರುವಂತಹ ಮುಂಗಡ ಹಣದ ಬಗ್ಗೆ ನಾವು ಯಾವುದೇ ಜವಾಬನ್ನು ನೀಡಿಲ್ಲ ಎಂದರೆ ಸರಿ. ನಿ.ಪಿ.**8** ರಲ್ಲಿ ಪ್ಯಾರಾ **5** ರಲ್ಲಿ ನಮೂದು ಇರುವ ವಿಷಯಗಳನ್ನು ಓದಿ ಹೇಳಿ ನಂತರ ವಕೀಲರು "ಈ ಬಗ್ಗೆ ಸಹಾ ಗವಿರಂಗಪ್ಪ ರವರು ಯಾವುದೇ ಜವಾಬು ಕೊಟ್ಟಿಲ್ಲ" ಎಂದು ಪ್ರಶ್ನೆ ಕೇಳಿದ್ದಾರೆ ಅದಕ್ಕೆ ಸಾಕ್ಷಿಯು "ಶಶಿಕಲಾ ರವರೇ ಬರಲಿಲ್ಲ" ಎಂದು ನುಡಿದಿದ್ದಾರೆ.

18) ನಿ.ಪಿ.**5** ರಲ್ಲಿ “**It is improper for me to accept the same without a valid agreement between us”** ಎಂಬುದಾಗಿ ಬರೆದಿದೆ ಎಂದರೆ ಸರಿ.

19) ನಿ.ಪಿ.**9** ರಲ್ಲಿ ಮತ್ತು ನಿ.ಪಿ.**1** ರಲ್ಲಿ ಮತ್ತು ನಿ.ಪಿ.**7** ರಲ್ಲಿ ಮತ್ತು ಈ ಪ್ರಕರಣದ ಅರ್ಜಿಯಲ್ಲಿ ನಮೂದು ಮಾಡಿರುವಂತಹ ಆಸ್ತಿಗಳ ಮಧ್ಯೆ ಯಾವುದೇ ಹೋಲಿಕೆಯು ಇರುವುದಿಲ್ಲ ಎಂದರೆ ಸುಳ್ಳು. ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ನನಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸುಳ್ಳು. ಅರ್ಜಿದಾರರಿಗೆ ಈ ಪ್ರಕರಣವನ್ನು ನಡೆಸುವುದಕ್ಕೆ ಯಾವುದೇ ತೊಂದರೆ

ಇಲ್ಲ ಎಂದರೆ ಸುಳ್ಳು.

20) ವಕೀಲರ ಕಚೇರಿ ನಡೆಸಲು ಅರ್ಜಿ ಸ್ವತ್ತು ಯಾವುದೇ ರೀತಿಯಲ್ಲಿಯೂ ಸೂಕ್ತವಾಗಿರುವುದಿಲ್ಲ ಎಂದರೆ ಸುಳ್ಳು. **9** ತಿಂಗಳ ಬಾಡಿಗೆ ಹಣ ಕೊಡಬೇಕಾಗಿದೆ ಎಂಬುದಾಗಿ ಸಹಾ ನಾವು ಸುಳ್ಳು ಪ್ರತಿಪಾದನೆ ಮಾಡಿದ್ದೇವೆ ಎಂದರೆ ಈ ಪ್ರಶ್ನೆಗೆ ಸಾಕ್ಷಿದಾರರು ಮೌನವಾಗಿ ನಿಂತಿದ್ದಾರೆ ಮತ್ತು ವಿತಂಡವಾದ ಮಾಡಿದ್ದಾರೆ.

21) ಒಂದು ದಿನಕ್ಕೆ **200** ರೂಪಾಯಿಗಳ ಲೆಕ್ಕದಲ್ಲಿ ದಿ:**01.01.2020** ರಿಂದ ದಿ:**11.12.2022** ರ ವರೆಗೆ **Mesne profit** ಹಣವನ್ನು ಎದುರುದಾರರು ಕೊಡಬೇಕು ಎಂಬುದಾಗಿ ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಿದ್ದೇನೆ ಎಂದರೆ ಸುಳ್ಳು.

**ಈ ಹಂತದಲ್ಲಿ ಸಾಕ್ಷಿದಾರರು ತಾವು ವಿಶ್ರಾಂತಿ ಗೃಹಕ್ಕೆ ಹೋಗಬೇಕಾಗಿದೆ ಎಂಬುದಾಗಿ ಹೇಳಿದ್ದಾರೆ, ಆದ ಕಾರಣದಿಂದ ಪಾಟೀ ಸವಾಲನ್ನು ಮುಂದೂಡಲಾಗಿದೆ .**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.